# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/300/13-14 ದಿನಾಂಕ : 27/09/2016

ಉಪಸ್ಥಿತರು: **ಶ್ರೀ ಲೋಕೇಶ ಪಿ. ಎನ್.** ಕ.ಆ.ಸೇ

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಹನುಮಂತಪ್ಪ ತಂದೆ ದಿ. ಕೆಂಚಪ್ಪ,<br>ಕೊಂಚಿಗೇರಿ ಗ್ರಾಮ, ಸಿರುಗುಪ್ಪ ತಾಲ್ಲೂಕು<br><br>(ಶ್ರೀ ಎಸ್. ರಾಘವೇಂದ್ರ, ವಕೀಲರು, ಬಳ್ಳಾರಿ) | (1) ಶ್ರೀ ಬಸಪ್ಪ ತಾಯಿ ದಿ. ಪಕ್ಕೀರಮ್ಮ<br>(2) ಶ್ರೀ ತಿಪ್ಪಣ್ಣ ತಂದೆ ಹರಿಜನ ಈರಪ್ಪ<br>(3) ಶ್ರೀ ಪೊಂಪನಗೌಡ ದೊಡ್ಡನಗೌಡ ತಂದೆ ಈರಪ್ಪ<br>(4) ಶ್ರೀ ತಿಪ್ಪನಗೌಡ ತಂದೆ ಸೋಮನಗೌಡ<br>ವಾದಿ 1 ರಿಂದ 4 ರವರ ವಾಸ<br>ಕೊಂಚಿಗೇರಿ ಗ್ರಾಮ, ಸಿರುಗುಪ್ಪ ತಾಲ್ಲೂಕು<br>(5) ತಹಶೀಲ್ದಾರರು, ಸಿರುಗುಪ್ಪ<br>(R1-4 ಶ್ರೀ ಎಸ್. ಜಿ ಷಣ್ಮುಖಪ್ಪ, ವಕೀಲರು, ಬಳ್ಳಾರಿ) |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ |
|---|---|---|---|
| ಸಿರುಗುಪ್ಪ | ಕೊಂಚಿಗೇರಿ | 208/C,<br>208/A/2 | 1.75,<br>0.12 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ ಇವರ ಎಂ ಆರ್ ನಂ 14/98-99 ದಿನಾಂಕ 17/01/1999, ಎಂ ಆರ್ ನಂ 55/03-04 ದಿನಾಂಕ 21/06/2004, ಎಂ ಆರ್ ನಂ 56/03-04 ದಿನಾಂಕ 21/06/2004 ಮತ್ತು ಎಂ ಆರ್ ನಂ 38/04-05 ದಿನಾಂಕ 12/11/2004 ಗಳ ಆದೇಶದ ವಿರುದ್ಧ ಮೇಲ್ಮನವಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಿಳಂಬ ಮನ್ನಾ ಮಾಡಿ ಪ್ರಕರಣ ದಾಖಲಿಸಿ ಕೊಳ್ಳಲಾಯಿತು ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಪ್ರಕರಣವನ್ನು ದಾಖಲಿಸಿಕೊಂಡು ಉಭಯ ಪಕ್ಷಗಾರರಿಗೂ ನೋಟೀಸನ್ನು ನೀಡಿ ದಿನಾಂಕ 28/01/2014 ರಿಂದ ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ವಾದಿಗಳು ತಮ್ಮ ಮೇಲ್ಮನವಿಯಲ್ಲಿ ಪ್ರತಿವಾದಿ 5 ರವರು ಮಾಡಿದ ಹಕ್ಕು ಬದಲಾವಣೆ ಸಂಖ್ಯೆ ಎಂ ನಂ 14/98-99 ದಿನಾಂಕ 17/01/1999, ಎಂ ನಂ 55/03-04 ದಿನಾಂಕ 21/06/2004 ಮತ್ತು ಎಂ ನಂ 56/03-04 ದಿನಾಂಕ 21/06/2004 ಮತ್ತು ಎಂ ನಂ 38/04-05 ದಿನಾಂಕ 12/11/2004 ರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿ, ಸದರಿ ಆದೇಶಗಳನ್ನು ರದ್ದುಪಡಿಸಲು ಕೋರಿರುತ್ತಾರೆ. ಮುಂದುವರೆದು ವಾದಿಯ ತಂದೆಯಾದ ಶ್ರೀ ಕೆಂಚಪ್ಪ ಇವರ ಹೆಸರಿಗೆ ಪ್ರಸ್ತಾಪಿತ ಆಸ್ತಿಯು ಇದ್ದು, ಕೆಂಚಪ್ಪ ಮತ್ತು ಹನುಮಂತಪ್ಪ ವರ ಹೆಸರಿಗೆ ಪಹಣಿಯಲ್ಲಿ ಹಕ್ಕು ದಾಖಲೆಯಿರುವುದಾಗಿ, ಕೆಂಚಪ್ಪನಿಗೆ ವಯಸ್ಸಾಗಿರುವುದರಿಂದ ಸದರಿ ಮೇಲ್ಮನವಿಯನ್ನು ಸಲ್ಲಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ವಾದಿಯು ಮೇಲ್ಮನವಿಯಲ್ಲಿ ಪ್ರತಿವಾದಿ 1 ಮತ್ತು 2 ರವರು ಎಂ ನಂ 14/98-99 ದಿನಾಂಕ 17/01/1999 ರಲ್ಲಿ ಯಾವುದೇ ಪಾಲುವಿಭಾಗ ಪತ್ರವಿಲ್ಲದೆ ಹಕ್ಕು ಬದಲಾವಣೆ ಮಾಡಿಸಿ ಕೊಂಡಿರುವುದಾಗಿ, ತಿಳಿಸುತ್ತಾ, ಪ್ರತಿವಾದಿ 5 ರವರು

ನಮೂನೆ – 21 ರ ನೋಟೀಸನ್ನು ಜಾರಿ ಮಾಡದೇ ಸದರಿ ಆದೇಶವನ್ನು ಮಾಡಿದ್ದು, ಕಾನೂನುಬಾಹಿರವೆಂದು ಸದರಿ ವಿಷಯವನ್ನು ತಿಳಿದ ಮೇಲೆ 2013 ರಲ್ಲಿ ಮೇಲ್ಮನವಿಯನ್ನು ಸಲ್ಲಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ.

ತಿಪ್ಪಣ್ಣ ಅಥವಾ ಅವನ ತಂದೆಯ ಹೆಸರಿಗೆ ಜಮೀನನ್ನು ಕ್ರಯಕ್ಕೆ ನೀಡಲು ಈರಪ್ಪನಿಗೆ ಅಥವಾ ಅವನ ತಂದೆಗೆ ಯಾವುದೇ ತರಹದ ಹಕ್ಕು ಇರುವುದಿಲ್ಲವೆಂದು ಕಾರಣ ಸದರಿ ನೊಂದಣಿ ಪತ್ರವನ್ನು ರದ್ದುಪಡಿಸಲು ಕೋರಿರುತ್ತಾರೆ. ಪ್ರತಿವಾದಿಗಳು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ಡಿ. ಈರಣ್ಣ ಮತ್ತು ಕೆಂಚಪ್ಪ ಇವರು ಈರಪ್ಪ ತಂದೆ ಬಸಪ್ಪ ಇವರಿಗೆ ದಿನಾಂಕ 23/04/1969 ರಲ್ಲಿ ಜಮೀನು ಮಾರಾಟ ಮಾಡುವಾಗ್ಯೆ ಈರಣ್ಣನಿಗೆ ಯಾವುದೇ ಹಕ್ಕು ಇದ್ದಿಲ್ಲವೆಂದು ತಿಳಿಸಿರುತ್ತಾರೆ. ಈ ಅಂಶಗಳ ಆಧಾರದ ಮೇಲೆ ಪ್ರಸ್ತಾಪಿತ ಹಕ್ಕು ಬದಲಾವಣೆ ಆದೇಶಗಳನ್ನು ರದ್ದು ಪಡಿಸಲು ಹಾಗೂ ಸದರಿ ಆದೇಶಗಳ ಪೂರ್ವದಲ್ಲಿನ ನಮೂದುಗಳನ್ನು ಕಂದಾಯ ದಾಖಲೆಗಳಲ್ಲಿ ಇಡಲು ಕೋರಿರುತ್ತಾರೆ.

ಪ್ರತಿವಾದಿ 1 ರಿಂದ 4 ರವರ ಪರ ವಕೀಲರು ವಿಚಾರಣೆಗೆ ಹಾಜರಾಗಿ ಲಿಖಿತ ವಾದವನ್ನು ಮಂಡಿಸಿರುತ್ತಾರೆ. ಪ್ರಸ್ತಾಪಿತ ಜಮೀನು ಸ. ನಂ. 208/C ವಿಸ್ತೀರ್ಣ 1.75 ಎಕರೆ ಹಾಗೂ ಸ. ನಂ. 208/A/2 ವಿಸ್ತೀರ್ಣ 0.12 ಎಕರೆ ಜಮೀನುಗಳು ಹರಿಜನ ಕೆಂಚಪ್ಪ ಇವರಿಗೆ ಸೇರಿದವುಗಳಾಗಿದ್ದು ಇವರ ಜೀವಿತಾವಧಿಯಲ್ಲಿ ಅನುಭವಿಸಿ, ತದನಂತರ ಮಕ್ಕಳಾದ ಈರಣ್ಣ, ಅಂಬಮ್ಮ ಮತ್ತು ಕೆಂಚಪ್ಪ ಇದ್ದು, ಕೆಂಚಪ್ಪ ಮತ್ತು ಲಿಂಗಮ್ಮ ಇವರ ಮರಣನಂತರ, ಇವರ ವಾರಸುದಾರರಾದ ಡಿ. ಈರಣ್ಣ ಮತ್ತು ಕೆಂಚಪ್ಪ ಇವರುಗಳು ಈರಪ್ಪ ತಂದೆ ಬಸಪ್ಪ ಇವರಿಗೆ ದಿನಾಂಕ 23/04/1996 ರಂದು ವಾದಿಯ ತಂದೆಯ ಮದುವೆಗಾಗಿ ಮಾರಾಟ ಮಾಡಿದ್ದು, ಸದರಿ ಈರಪ್ಪನು ಜಮೀನಿನ ಸ್ವಾಧಿನಾನುಭವ ಹೊಂದಿದ್ದನೆಂದು, ಅವನ ಮರಣ ನಂತರ ಬಸವಿ ಪಕ್ಕೀರಮ್ಮ ಮತ್ತು ಮಗನಾದ ಹರಿಜನ ತಿಪ್ಪಣ್ಣ ಇವರು ವಾರಸುದಾರರಾಗಿದ್ದು, ಈರಪ್ಪ ಇವರ ಜೀವಿತ ಕಾಲದಲ್ಲಿ ಹರಿಜನ ಬಸಪ್ಪ ತಾಯಿ ಬಸವಿ ಪಕ್ಕೀರಮ್ಮ ಮತ್ತು ಹರಿಜನ ತಿಪ್ಪಣ್ಣ ಇವರ ಹೆಸರಿಗೆ ಎಂ ನಂ 14/1998-99 ದಿನಾಂಕ 17/01/1999 ರಲ್ಲಿ ಹಕ್ಕು ಬದಲಾವಣೆಯಾಗಿರುವುದಾಗಿ ತಿಳಿಸಿರುತ್ತಾರೆ.

ಸದರಿ ಹಕ್ಕು ಬದಲಾವಣೆ ಆದೇಶಗಳಾಗುವಾಗ್ಯೆ ವಾದಿ ಅಥವಾ ವಾದಿಯ ಪೂರ್ವಜರು ಯಾವುದೇ ಆಕ್ಷೇಪಣೆಗಳನ್ನು ಮಾಡದೇ, ಕುಟುಂಬದ ಪಾಲು ವಿಭಾಗದಂತೆ ಪ್ರತಿವಾದಿ 1 ರವರಿಗೆ ಆಸ್ತಿ ಪ್ರಾಪ್ತವಾಗಿರುವುದಾಗಿ ತಿಳಿಸಿರುತ್ತಾರೆ. ತದನಂತರ ಪ್ರತಿವಾದಿ 1 ರವರು ಪ್ರತಿವಾದಿ 2 ರವರಿಗೆ ದಿನಾಂಕ 21/09/2004 ರಂದು ಜಮೀನು ಮಾರಾಟ ಮಾಡಿದ್ದು, ಅದೇ ಪ್ರಕಾರ ಅವರ ಹೆಸರಿಗೆ ಹಕ್ಕು ಬದಲಾವಣೆಯಾಗಿದ್ದು, ಪ್ರತಿವಾದಿ 2 ರವರು ಪ್ರತಿವಾದಿ 3 ಮತ್ತು 4 ರವರಿಗೆ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದು, ಎಂ ನಂ 55, 56/2003-04 ರಲ್ಲಿ ಹಕ್ಕು ಬದಲಾವಣೆಯಾಗಿರುವುದಾಗಿ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ವಾದಿಯ ಪೂರ್ವಜರು ಪ್ರಸ್ತಾಪಿತ ಜಮೀನುಗಳನ್ನು ಮಾರಾಟ ಮಾಡಿದ್ದು, ಪ್ರತಿವಾದಿಗಳ ಪೂರ್ವಜರು ಈ ಜಮೀನುಗಳನ್ನು ಕ್ರಯಕ್ಕೆ ಪಡೆದಿದ್ದು, ಈ ವಿಷಯವು ವಾದಿ ಮತ್ತು ಅವರ ತಂದೆಗೆ ತಿಳಿದಿದ್ದು, ಪ್ರತಿವಾದಿಗಳಿಂದ ಆಸ್ತಿ ಪಡೆಯಲು ಈ ರೀತಿ ಸತ್ಯಾಂಶಗಳನ್ನು ಮರೆಮಾಚಿ ಮೇಲ್ಮನವಿ ಸಲ್ಲಿಸಿರುವುದನ್ನು ವಜಾಗೊಳಿಸ ಬೇಕೆಂದು ಕೋರಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ಮತ್ತು ಮಂಡಿಸಿದ ವಾದವನ್ನು ಪರಿಶೀಲಿಸಲಾಗಿ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಯ ಪತ್ರದ ಮೇರೆಗೆ ಹಲವಾರು ವಹಿವಾಟುಗಳು ನಡೆದಿದ್ದು, ಸದರಿ ಪ್ರಕರಣವು ಮೇಲ್ನೋಟಕ್ಕೆ ಸಿವಿಲ್ ಸ್ವರೂಪದ್ದಾಗಿರುವುದರಿಂದ, ವಾದಿಗಳು ಸಕ್ಷಮ ಪ್ರಾಧಿಕಾರಿದಲ್ಲಿ ಪ್ರಶ್ನಿಸಿ ಕೊಳ್ಳಲು ಆದೇಶಿಸುವ ಈ ಕೆಳಕಂಡ ಆದೇಶ.

## :: ಆದೇಶ ::

<u>ವಾದಿಯ ಮೇಲ್ಮನವಿಯನ್ನು ತಿರಸ್ಕರಿಸಿದೆ</u>

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಕೊಂಚಿಗೇರಿ ಗ್ರಾಮದ ಸ. ನಂ. 208/C, 208/A/2 ವಿಸ್ತೀರ್ಣ: 1.75, 0.12 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಸಲ್ಲಿಸಿರುವ ಮೇಲ್ಮನವಿಯನ್ನು ವಜಾಗೊಳಿಸಿ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ,ಬರೆಯಿಸಿ ತಪ್ಪುಗಳನ್ನು ತಿದ್ದಿ ದಿನಾಂಕ:27.09.2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಸಹಾಯಕ ಆಯುಕ್ತರು,
ಬಳ್ಳಾರಿ.